**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು</u>**

**<u>ಸಿಸಿ ಸಂಖ್ಯೆ: 101/2025</u>**

| | | |
|---|---|---|
| **ಫಿರ್ಯಾದುದಾರರು** | : | ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,<br>ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ,<br>ನಂಜನಗೂಡು. |

ವಿರುದ್ಧ

| | | |
|---|---|---|
| **ಆರೋಪಿಗಳು** | : | ಶ್ರೀ.ಶಂಕರ ಮತ್ತು ಇತರರು |

:: **<u>ದೋಷಾರೋಪಣೆ</u>** ::

**ಶ್ರೀ ಸತೀಶ ಕೆ.ಜಿ., ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ನಂಜನಗೂಡು ಆದ ನಾನು ಆರೋಪಿಗಳಾದ-

1) ಶ್ರೀ.ಶಂಕರ ಬಿನ್ ಗೋಪಾಲಯ್ಯ
ವಯಸ್ಸು ಸುಮಾರು 41 ವರ್ಷ,

2) ಶ್ರೀಮತಿ.ಮಲ್ಲಿಗಮ್ಮ ಕೋಂ ಗೋಪಾಲಯ್ಯ
ವಯಸ್ಸು ಸುಮಾರು 54 ವರ್ಷ,

3) ಶ್ರೀ.ನಾರಾಯಣ ಬಿನ್ ಪಾಪಯ್ಯ
ವಯಸ್ಸು ಸುಮಾರು 45 ವರ್ಷ,

4) ಶ್ರೀ.ಕೃಷ್ಣ ಬಿನ್ ಪಾಪಯ್ಯ
ವಯಸ್ಸು ಸುಮಾರು 38 ವರ್ಷ,

ನಂಜನಗೂಡು ತಾಲ್ಲೂಕಿನ ಹೆಗ್ಗಡಹಳ್ಳಿ ಗ್ರಾಮದ ನಿವಾಸಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:-

ಮೊದಲನೆಯದಾಗಿ ದಿನಾಂಕ 23.06.2024 ರಂದು ಬೆಳಿಗ್ಗೆ 07.00 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಗ್ಗಡಹಳ್ಳಿ ಗ್ರಾಮದಲ್ಲಿರುವ ಶ್ರೀ.ಅಂಬೇಡ್ಕರ್ ಸಮುದಾಯ ಭವನದ ಪಕ್ಕದ ರಸ್ತೆಯಲ್ಲಿ ಆರೋಪಿಗಳಾದ ನೀವು ಚಾಸಾ-1 ರವರ ಜೊತೆ ಜಗಳ ತೆಗೆದು ಚಾಸಾ-1 ರವರನ್ನು ಉದ್ದೇಶಿಸಿ "ಸೂಳೆಮಗನೆ, ಬೋಳಿ ಮಗನೆ, ನಿನ್ನ ಅಮ್ಮನ್" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಚಾಸಾ-1 ರವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಕುಪಿತರಾಗಿ ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಯಾವುದೇ ಅಪರಾಧವನ್ನು ಮಾಡಬೇಕೆಂಬ ಉದ್ದೇಶದಿಂದ ಅವರನ್ನು ಅವಮಾನಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ-1 ರವರ ಜೊತೆ ಜಗಳ ತೆಗೆದು ಚಾಸಾ-1 ರವರನ್ನು ಉದ್ದೇಶಿಸಿ "ನೀನು ಇದ್ದರೆ ತಾನೇ ನಿನ್ನ ಅಣ್ಣನನ್ನು ಆಸ್ಪತ್ರೆಗೆ ಸೇರಿಸಿ ಉಳಿಸಿಕೊಳುತ್ತೀಯಾ ನಿನ್ನನ್ನೆ ಮುಗಿಸುತ್ತೇವೆ, ನಿಮ್ಮ ಅಣ್ಣನು ಸಾಯುತ್ತಾನೆ" ಎಂದು ಜೀವಬೆದರಿಕೆ ಹಾಕಿದ್ದು, ಆ ಮೂಲಕ ಚಾಸಾ-1 ರವರು ಹೆದರುವಂತೆ ಮಾಡಿ ಅವರು ಕಾನೂನು ಸಮ್ಮತವಾಗಿ ಮಾಡಬೇಕಾಗಿರುವ ಕೃತ್ಯವನ್ನು ಮಾಡದಂತೆ ಅಥವಾ ಕಾನೂನು ಸಮ್ಮತವಾಗಿ ಮಾಡಬಾರದ ಕೃತ್ಯವನ್ನು ಮಾಡುವಂತೆ ಅಪಾಯದ ಭೀತಿಯನ್ನು ಹುಟ್ಟಿಸಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ-1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 1ನೇ ಆರೋಪಿಯಾದ ನೀವು ಮಾರಕಾಯುಧವಾದ ಮಚ್ಚಿನಿಂದ ಚಾಸಾ-1 ರವರಿಗೆ ಹಲ್ಲೆ ಮಾಡಲು ಮಚ್ಚನ್ನು ಬೀಸಿದಾಗ ಚಾಸಾ-1 ರವರು ತಪ್ಪಿಸಿಕೊಂಡು ಓಡಲು ಪ್ರಯತ್ನ ಪಟ್ಟು ಕಿರುಚಿ ಕೊಂಡಾಗ ಹೊಡೆದಿದ್ದು, 3 ಮತ್ತು 4ನೇ ಆರೋಪಿಗಳಾದ ನೀವು ದೊಣ್ಣೆಯಿಂದ ಚಾಸಾ-1 ರವರ ಹಣೆಗೆ ಹೊಡೆದಿದ್ದು, 1ನೇ

ಆರೋಪಿಯಾದ ನೀವು 2ನೇ ಆರೋಪಿಯ ಬಳಿ ದೊಣ್ಣೆ ಪಡೆದುಕೊಂಡು ಚಾಸಾ-1 ರವರ ಎಡಮಂಡಿಗೆ ಮತ್ತು ಬೆನ್ನಿಗೆ ಸ್ವ-ಇಚ್ಚೆಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಚಾಸಾ-1 ರವರ ಜೊತೆ ಜಗಳ ತೆಗೆದು, ಜಗಳ ಬಿಡಿಸಲು ಬಂದ ಚಾಸಾ-2 ರವರನ್ನು ಉದ್ದೇಶಿಸಿ "ನೀನು ನಿನ್ನಪ್ಪನ ಜೊತೆ ಸ್ಮಶಾನಕ್ಕೆ ಹೋಗು" ಎಂದು ಕೈಗಳಿಂದ ಚಾಸಾ-2 ರವರ ಮೈ-ಕೈಗಳಿಗೆ ಸ್ವ-ಇಚ್ಚೆಯಿಂದ ಹಲ್ಲೆ ಮಾಡಿ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆಃ1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

1 ರಿಂದ 4ನೇ ಆರೋಪಿಗಳ ಉತ್ತರಃ

ಪ್ರಶ್ನೆಃ2- ಸದರಿ ಆರೋಪಣೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ರಿಂದ 4ನೇ ಆರೋಪಿಗಳ ಉತ್ತರಃ

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 02.02.2026

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.